ನಿವ್ಯೋಡನೆ

# ಸೈಬರ್ ಸುರಕ್ಷತೆಗೆ ಒತ್ತು

ಅಂತರ್ಜಾಲ ಬಳಸುವ ಮಕ್ಕಳು ತಮಗೆ ಅರಿವಿಲ್ಲದಂತೆಯೇ ಸೈಬರ್ ಪೀಡನೆಗೆ ಒಳಗಾಗುವುದನ್ನು ತಡೆಯಲು ಹಾಗೂ ಮಕ್ಕಳು ತಪ್ಪು ದಾರಿಯಲ್ಲಿ ನಡೆಯುವುದನ್ನು ತಪ್ಪಿಸಲು ನೀತಿಸಂಹಿತೆಯೊಂದು ತೀರಾ ಅಗತ್ಯವಾಗಿತ್ತು.

ಉಪಯುಕ್ತ ಮಾಹಿತಿಯ ಜೊತೆಗೆ ಸಮಾಜದ ಎಲ್ಲ ಬಗೆಯ ಕಸವೂ ಅಂತರ್ಜಾಲದಲ್ಲಿ ತುಂಬಿಕೊಂಡಿರುವ ಸಂದರ್ಭದಲ್ಲಿ ಮಕ್ಕಳು ಇಂಟರ್ನೆಟ್ ಬಳಸುವ ಬಗ್ಗೆ ಪೋಷಕರು ನಿಗಾ ವಹಿಸುವುದು ಅಗತ್ಯ. ಸೈಬರ್ ಅಪರಾಧಗಳು ಹೆಚ್ಚುತ್ತಿರುವುದರ ಹಿನ್ನೆಲೆಯಲ್ಲಿ, ಮಕ್ಕಳನ್ನು ಮುಕ್ತವಾಗಿ ಅಂತರ್ಜಾಲ ಬಳಸಲು ಬಿಡುವುದಕ್ಕೂ ಅವರನ್ನು ಕಣ್ಣಿಗೆ ಬಟ್ಟೆ ಕಟ್ಟಿ ಕಾಡಿಗೆ ಬಿಡುವುದಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲ. ಹೋಂವರ್ಕ್, ಅಸೈನ್‌ಮೆಂಟ್ ನೆಪದಲ್ಲಿ ವಿದ್ಯಾರ್ಥಿಗಳು ಅಂತರ್ಜಾಲ ಬಳಸುವುದನ್ನು ಶಾಲೆಗಳು ಕೂಡ ಅನಿವಾರ್ಯವಾಗಿಸುತ್ತಿವೆ. ಇಂಥ ಸಂದರ್ಭದಲ್ಲಿ ಚಿಣ್ಣರ ಮೈಮನಸು ಅಂತರ್ಜಾಲದಿಂದ ಮಲಿನವಾಗದಂತೆ ನೋಡಿಕೊಳ್ಳಬೇಕಾದುದು ಪೋಷಕರ ಜೊತೆಗೆ ಶಾಲೆಗಳ ಕರ್ತವ್ಯವೂ ಆಗಿದೆ. ಈ ನಿಟ್ಟಿನಲ್ಲಿ, ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಇದೇ ಮೊದಲ ಬಾರಿಗೆ ಸೈಬರ್ ಪೀಡನೆ (cyber bullying) ತಡೆಗಟ್ಟುವುದಕ್ಕೆ ಸಂಬಂಧಿಸಿದಂತೆ ನೀತಿಸಂಹಿತೆಯೊಂದನ್ನು ಪರಿಚಯಿಸಿರುವುದು ಸ್ವಾಗತಾರ್ಹ.

ಅಂತರ್ಜಾಲ ಬಳಸುವ ಮಕ್ಕಳು ತಮಗೆ ಅರಿವಿಲ್ಲದಂತೆಯೇ ಸೈಬರ್ ಪೀಡನೆಗೆ ಒಳಗಾಗುವುದನ್ನು ತಡೆಯಲು ಹಾಗೂ ಮಕ್ಕಳು ತಪ್ಪು ದಾರಿಯಲ್ಲಿ ನಡೆಯುವುದನ್ನು ತಪ್ಪಿಸಲು ನೀತಿಸಂಹಿತೆಯೊಂದು ತೀರಾ ಅಗತ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಶಾಲೆಗಳು, ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಮಾರ್ಗದರ್ಶನ ಸೂತ್ರಗಳನ್ನು 'ಎನ್‌ಸಿಇಆರ್‌ಟಿ' ರೂಪಿಸಿದೆ. ಸೈಬರ್ ಪೀಡನೆಯ ಅನುಭವ ಉಂಟಾದಲ್ಲಿ, ಅದನ್ನು ಶಿಕ್ಷಕರು– ಪೋಷಕರು ಅಥವಾ ನಂಬಿಕಸ್ಥ ವ್ಯಕ್ತಿಯ ಗಮನಕ್ಕೆ ತಕ್ಷಣವೇ ತರುವಂತೆ ವಿದ್ಯಾರ್ಥಿಗಳಿಗೆ ಸೂಚಿಸಲಾಗಿದೆ. ಕ್ಯಾಂಪಸ್‌ಗಳಲ್ಲಿ ಬಳಸಲಾಗುವ ಕಂಪ್ಯೂಟರ್‌ಗಳ ಸುರಕ್ಷತೆಯ ಬಗ್ಗೆ ಹೆಚ್ಚಿನ ಗಮನ ವಹಿಸುವಂತೆಯೂ, ಅಧಿಕೃತ ಸಾಫ್ಟ್‌ವೇರ್‌ಗಳ ಬಳಕೆ ಹಾಗೂ ಪಾಸ್‌ವರ್ಡ್ ಸಂರಕ್ಷಿತ ವೈ ಫೈ ಬಳಕೆಯ ಕುರಿತು ನಿಗಾ ವಹಿಸಲು ತಜ್ಞರ ನೆರವು ಪಡೆಯುವಂತೆಯೂ ಶಾಲೆಗಳಿಗೆ ಸೂಚಿಸಲಾಗಿದೆ.

ನಿಂದನೆ, ಬೆದರಿಕೆ, ಒರಟು ಅಥವಾ ಅಶ್ಲೀಲ ಭಾಷೆಯ ಬಳಕೆ, ದ್ವೇಷವನ್ನು ಉಂಟುಮಾಡುವ ಸಂದೇಶಗಳ ಬಗ್ಗೆ ಜಾಗರೂಕವಾಗಿ ಇರುವಂತೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು ಶಾಲೆಗಳ ಹಾಗೂ ಪೋಷಕರ ಕರ್ತವ್ಯ. ತಮ್ಮ ಇ–ಮೇಲ್‌ಗಳನ್ನು ಅಥವಾ ಆನ್‌ಲೈನ್ ಪ್ರೊಫೈಲ್‌ಗಳನ್ನು ಬೇರೆ ಯಾರಾದರೂ ಬಳಸುತ್ತಿದ್ದಾರೆಯೇ ಎನ್ನುವ ಬಗ್ಗೆ ಕೂಡ ಮಕ್ಕಳು ಎಚ್ಚರಿಕೆ ವಹಿಸಬೇಕು. ಅದೇರೀತಿ, ಅಂತರ್ಜಾಲವನ್ನು ವಿದ್ಯಾರ್ಥಿಗಳು ಯಾವುದಕ್ಕಾಗಿ ಬಳಸುತ್ತಿದ್ದಾರೆ ಹಾಗೂ ಜಾಲತಾಣದಲ್ಲಿ ಏನನ್ನು ಹುಡುಕಾಡುತ್ತಿದ್ದಾರೆ ಎನ್ನುವ ಬಗ್ಗೆ ಬೋಧಕ ಸಿಬ್ಬಂದಿ ನಿಯಮಿತವಾಗಿ ಪರಿಶೀಲಿಸಬೇಕು. ಇದರ ಜೊತೆಗೆ, ಸೈಬರ್ ಪೀಡಕರ ಸಹವಾಸಕ್ಕೆ ವಿದ್ಯಾರ್ಥಿಗಳು ಒಳಗಾಗದಂತೆ ಮುನ್ನೆಚ್ಚರಿಕೆ ವಹಿಸಲು ಕೂಡ 'ಎನ್‌ಸಿಇಆರ್‌ಟಿ' ತಿಳಿಸಿದೆ.

ಕಳೆದ ಫೆಬ್ರುವರಿಯಲ್ಲಿ ಹರಿಯಾಣದ ಶಾಲೆಯೊಂದರ ಏಳನೇ ತರಗತಿಯ ವಿದ್ಯಾರ್ಥಿಯೊಬ್ಬ, ಶಿಕ್ಷಕಿ ಹಾಗೂ ಆಕೆಯ ಪುತ್ರಿಯನ್ನು ಅತ್ಯಾಚಾರ ಮಾಡುವುದಾಗಿ ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಕಳುಹಿಸಿದ್ದ. ಇದೇ ಶಾಲೆಯ ಮತ್ತೊಬ್ಬ ವಿದ್ಯಾರ್ಥಿ ತನ್ನ ಶಿಕ್ಷಕಿಯನ್ನು ಜಾಲಿರೈಡ್, ಕ್ಯಾಂಡಲ್ ಲೈಟ್ ಡಿನ್ನರ್ ಹಾಗೂ ಸರಸಕ್ಕೆ ಆಹ್ವಾನಿಸಿದ್ದ. ದೇಶವ್ಯಾಪಿ ಸುದ್ದಿಯಾಗಿದ್ದ ಈ ಚರ್ಚೆಗಳ ಭಾಗವಾಗಿಯೇ 'ಎನ್‌ಸಿಇಆರ್‌ಟಿ'ಯ ಸೈಬರ್ ಸುರಕ್ಷತೆಯ ನಿಯಮಾವಳಿ ರೂಪುಗೊಂಡಿದೆ.

ಅಂತರ್ಜಾಲದ ಮೂಲಕ ವಿದ್ಯಾರ್ಥಿಗಳು ಶೋಷಣೆಗೆ ಒಳಗಾಗದಂತೆ ಹಾಗೂ ಅಂತರ್ಜಾಲದ ಮೂಲಕ ವಿದ್ಯಾರ್ಥಿಗಳಲ್ಲಿ ಮನೋವಿಕಾರ ಹೆಚ್ಚದಂತೆ ಈಗಾಗಲೇ ಕೆಲವು ಪ್ರತಿಷ್ಠಿತ ಶಾಲೆಗಳು ಗಮನ ಹರಿಸಿವೆ. ಅಂತರ್ಜಾಲವನ್ನು ಸುರಕ್ಷಿತವಾಗಿ ಬಳಸಲು ಶಾಲಾ ಜಾಗೃತ ಸಮಿತಿಗಳು ಕಾರ್ಯ ನಿರ್ವಹಿಸುತ್ತಿವೆ. ಇಂಥ ಚಟುವಟಿಕೆಗಳನ್ನು ವ್ಯಾಪಕಗೊಳಿಸುವ ನಿಟ್ಟಿನಲ್ಲಿ 'ಎನ್‌ಸಿಇಆರ್‌ಟಿ' ಮಾರ್ಗದರ್ಶಿ ಸೂತ್ರಗಳು ಸಹಕಾರಿಯಾಗಲಿವೆ.

ಸೈಬರ್ ಸುರಕ್ಷತೆಯನ್ನು ನಿಯಂತ್ರಣಗಳಿಂದ ಸಾಧಿಸುವುದರ ಜೊತೆಗೆ, ಯಾವುದು ಒಳಿತು ಮತ್ತು ಯಾವುದು ಕೆಡುಕು ಎನ್ನುವ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವುದು ಅತ್ಯಗತ್ಯ. ಪಾಸ್‌ವರ್ಡ್‌ಗಳನ್ನು ಕಂಪ್ಯೂಟರ್‌ಗಳಲ್ಲಿ ಸೇವ್ ಮಾಡುವುದು, ಪರಿಚಿತರಲ್ಲದ ವ್ಯಕ್ತಿಗಳೊಂದಿಗೆ ಸಂಬಂಧ ಬೆಳೆಸುವುದು, ಸಂಶಯ ಹುಟ್ಟಿಸುವ ಲಿಂಕ್‌ಗಳನ್ನು ಕ್ಲಿಕ್ಕಿಸುವುದು ಅಥವಾ ಡೌನ್‌ಲೋಡ್ ಮಾಡಿಕೊಳ್ಳುವುದು – ಇವೆಲ್ಲದರಿಂದ ಉಂಟಾಗುವ ಅಪಾಯಗಳ ಕುರಿತು ತಿಳಿವಳಿಕೆ ಮೂಡಿಸಬೇಕು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪೋಷಕರ ಸಮನ್ವಯ ಪ್ರಯತ್ನಗಳು ನಡೆಯಬೇಕು.

■ ರಘುನಾಥ ಚ.ಹ.



ಈಶ್ವರ್